Review Of Research
Vol. 3 | Issue. 12 | Sept. 2014
Impact Factor : 2.1002 (UIF)
ISSN:-2249-894X
Available online at www.ror.isrj.net

# ಕುರುಬರ (ಹಾಲುಮತ ಗೌಡ) ಸಾಮಾಜಿಕ, ಧಾರ್ಮಿಕ, ಆರ್ಥಿಕ ಜೀವನ ವಿಧಾನ. ತುಮಕೂರು ಜಿಲ್ಲೆಯನ್ನು ಪರಿಗಣಿಸಿ



ಲೇಖಕರು : ರಾಧಾಮಣಿ ಟಿ ಆರ್, ಸಂಶೋಧನಾ ವಿದ್ಯಾರ್ಥಿನಿ, ಬುಡಕಟ್ಟು ಅಧ್ಯಯನ ವಿಭಾಗ, ಗಿರಿಸೀಮೆ, ಕನ್ನಡ ವಿಶ್ವ ವಿದ್ಯಾಲಯ, ವಿದ್ಯಾರಣ್ಯ, ಹಂಪಿ.

**Abstract :** ಕರ್ನಾಟಕ ರಾಜ್ಯದಲ್ಲಿ ತುಮಕೂರು ಜಿಲ್ಲೆಯು ರಾಜಧಾನಿ ಕೇಂದ್ರದಿಂದ ಕೇವಲ ೭೨ ಕಿ.ಮೀ. ಅಂತರದಲ್ಲಿದ್ದು, ಎಲ್ಲಾ ವಿಧವಾದ ಶೈಕ್ಷಣಿಕ ಚಟುವಟಿಕೆ, ವ್ಯಾಪಾರ, ವಾಣಿಜ್ಯ ಉದ್ದಿಮೆಗಳಿಗೂ ತವರು ಮನೆಯಾಗಿದೆ. ಇಲ್ಲಿ ಎಲ್ಲಾ ಜಾತಿಯ ಜನರು ವಾಸಿಸುತ್ತಾರೆ. ಅದರಲ್ಲಿ ಕುರುಬ ಸಮುದಾಯವು ಬಹಳ ಮುಖ್ಯವಾದುದು. ಜಿಲ್ಲೆಯಲ್ಲಿ ಅತಿಹೆಚ್ಚು ಜನಸಂಖ್ಯೆಯು ಹೊಂದಿದ ೩ನೇ ಜಾತಿ ಕುರುಬ ಸಮುದಾಯವಾಗಿದೆ. ಈ ಸಮುದಾಯದ ಜನರ ಮೂಲ ವೃತ್ತಿ ಕುರಿ ಸಾಕಾಣಿಕೆ ಮತ್ತು ಕಂಬಳಿ ನೇಯ್ಗೆಯಾಗಿದೆ. ಕುರಿ ಸಾಕಾಣಿಕೆ ಈ ಮೂಲದ ಪಾರಂಪರಿಕ ವೃತ್ತಿಯಾಗಿದೆ. ಕಂಬಳಿ ನೇಯ್ಗೆಯು ಈ ಸಮುದಾಯದ ಆರ್ಥಿಕ ಮೂಲವಾಗಿದೆ. ಈ ವೃತ್ತಿಗೆ ಉತ್ತಮವಾದ ಮಾರುಕಟ್ಟೆ ಸೌಲಭ್ಯ ದೊರೆಯದೆ ಇತ್ತೀಚಿಗೆ ನಶಿಸುವ ಹಂತದಲ್ಲಿದೆ. ಜನರು ಬೇರೆ ಬೇರೆ ವೃತ್ತಿಯ ಕಡೆಗೆ ಮುಖ ಮಾಡುವಂತಾಗಿದೆ. ಆದರೆ ಸಮುದಾಯದ ಅನೇಕ ಜನರು ಇಂದಿಗೂ ಪಾರಂಪರಿಕ ವೃತ್ತಿಯನ್ನು ಮುಂದುವರೆಸಿ ಸಮುದಾಯದ ಕುಲಕಸುಬಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇಂತಹ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಜೀವನ ವಿಧಾನವನ್ನು ಈ ಲೇಖನವು ಒಳಗೊಂಡಿದೆ

**ಪೀಠಿಕೆ :** ಇಂದು ಕುರುಬ ಸಮುದಾಯವು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಹರಡಿದೆ. ಮೂಲತಃ ಕುರಿಗಾಹಿಗಳಾದ ಕುರುಬರ ಪಾರಂಪರಿಕ ವೃತ್ತಿ ಕಂಬಳಿ ನೇಯ್ಗೆ. ಈಗ ಭಾಗಶಃ ಕಡಿಮೆಯಾಗಿದೆ ಆದರೂ ಕೆಲವು ಜಿಲ್ಲೆಗಳಲ್ಲಿ ಬಹುತೇಕ ಪ್ರಮಾಣದಲ್ಲಿ ಈ ವೃತ್ತಿಯನ್ನು ಮುಂದುವರಿಸಿದ್ದಾರೆ. ಈ ಕುರುಬ ಸಮುದಾಯವು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಭಾಗಶಃ ನೆಲೆಸಿದ್ದಾರೆ. ಇದರಲ್ಲಿ ತುಮಕೂರು ಜಿಲ್ಲೆಯನ್ನು ಪ್ರಸ್ತುತ ಲೇಖನವು ಒಳಗೊಂಡಿದೆ. ಕುರುಬ ಸಮುದಾಯವು ತುಮಾಕುರು ಜಿಲ್ಲೆಯ ಕೊರಟಗೆರೆ, ತುಮಕೂರು, ಗುಬ್ಬಿ, ಮಧುಗಿರಿ, ಪಾವಗಡ, ಶಿರಾ, ಚಿಕ್ಕ ನಾಯಕನಹಳ್ಳಿ, ತಿಪಟೂರು, ಕುಣಿಗಲ್, ತುರುವೇಕೆರೆ ಈ ೧೦ ತಾಲ್ಲೂಕುಗಳಲ್ಲಿಯೂ ನೆಲೆಸಿದೆ. ಇಲ್ಲಿನ ಎಲ್ಲಾ ಕುರುಬರ ವಂಶಪಾರಂಪರಿಕ ವೃತ್ತಿ ಕುರಿ ಸಾಕಾಣಿಕೆ ಮತ್ತು ಕಂಬಳಿ ನೇಯ್ಗೆಯಾಗಿದೆ. ಅದರಲ್ಲಿಯೂ ವಿಶೇಷವಾಗಿ ಚಿಕ್ಕ ನಾಯಕನ ಹಳ್ಳಿ, ತಿಪಟೂರು, ಶಿರಾ ತಾಲ್ಲೂಕುಗಳಲ್ಲಿ ಈ ವೃತ್ತಿಯು ಅಚ್ಚಳಿಯದೇ ಉಳಿದಿದೆ.

**ಅಧ್ಯಯನ ಉದ್ದೇಶ :**

- ಸಮುದಾಯದ ಸಾಮಾಜಿಕ ಸ್ಥಾನಮಾನ ತಿಳಿಯುವುದು.
- ಸಮುದಾಯದ ಆರ್ಥಿಕ ಮೂಲಗಳನ್ನು ತಿಳಿಯುವುದು.
- ಸಮುದಾಯದ ಧಾರ್ಮಿಕ ಆಚರಣೆಯನ್ನು ತಿಳಿಯುವುದು.
- ಸಮುದಾಯದ ಶಿಕ್ಷಣದ ಮಟ್ಟ ತಿಳಿಯುವುದು.

**ಆಧ್ಯಯನದ ವಿಧಾನ :**

ಜಿಲ್ಲೆಯಾದ್ಯಂತ ಕ್ಷೇತ್ರ ಕಾರ್ಯಕೈಗೊಂಡು ಮಾಹಿತಿ ಸಂಗ್ರಹಿಸಲು ಅಂತರಶಿಸ್ತೀಯ ಮತ್ತು ಬಹುಶಿಸ್ತೀನ ವಿಧಾನವನ್ನು ಬಳಸಲಾಗಿದೆ. ಕೆಲವು ಕಡೆ ವಿಷಯ ಅಧ್ಯಯನ ವಿಧಾನವನ್ನು ಅಳಡಿಸಲಾಗಿದೆ. ಮತ್ತು ಮಾಧ್ಯಮಿಕ ಮೂಲದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ.

Review Of Research
Vol. 3 | Issue. 12 | Sept. 2014
Impact Factor : 2.1002 (UIF)
ISSN:-2249-894X Available online at www.ror.isrj.net

**ಸಾಮಾಜಿಕ ಜೀವನ :** ಕುರುಬ ಸಮುದಾಯವು ತನ್ನದೇ ಆದ ಆಚಾರ–ವಿಚಾರ ನಂಬಿಕೆ ನಡವಳಿಕೆಯನ್ನು ಹೊಂದಿದೆ. ಈ ಸಮುದಾಯವು ಕೆಲವು ಕಡೆ ಬೇರೆ ಸಮುದಾಯದ ಜನರೊಂದಿಗೆ (ಊರುಗಳಲ್ಲಿ ) ಕೆಲವು ಕಡೆ ಪ್ರತ್ಯೇಕವಾಗಿ (ಹಟ್ಟಿ ಕುರುಬರ ಹಟ್ಟಿ) ಗಳಲ್ಲಿ ವಾಸವಾಗಿದೆ. ಯಾವುದೇ ಸಮುದಾಯದ ಪ್ರಭಾವಕ್ಕೆ ಒಳಗಾಗದೇ ಅಲ್ಪ ಪ್ರಮಾಣದಲ್ಲಿ ತಮ್ಮ ಮೂಲ ಸಾಂಸ್ಕೃತಿಕ ಸಂಧಿಯಲ್ಲಿಯೇ ಜೀವನ ನಡೆಸುವುದನ್ನು ನೋಡಬಹುದಾಗಿದೆ. ಈ ಸಮುದಾಯದ ಸಂಸ್ಕೃತಿಗೆ ಪ್ರಾಚೀನ ಇತಿಹಾಸವಿದೆ. ತಮ್ಮ ಸಾಮಾಜಿಕ ಜೀವನವನ್ನು ಬದಲಾಯಿಸಿಕೊಳ್ಳುವ ಮಟ್ಟಕ್ಕೆ ಇತರರ ಪ್ರಭಾವಕ್ಕೆ ಒಳಪಟ್ಟಿಲ್ಲ. ಕುರುಬರ ಸಾಮಾಜಿಕ ಜೀವನ ಶೈಲಿ, ಪಾರಂಪರಿಕ ಮಾದರಿಯಾಗಿದ್ದು, ಆಧುನೀಕರಣ, ಜಾಗತೀಕರಣದ ಭರಾಟೆಗೆ ಒಳಪಟ್ಟು ಪಾರಂಪರಿಕ ಪದ್ಧತಿಗಳಿಂದ ಪರಿವರ್ತನೆ ಹೊಂದುತ್ತಿದ್ದರೆ ಇಷ್ಟೆಲ್ಲಾ ಬದಲಾವಣೆಗಳ ನಡುವೆ ತಮ್ಮ ಪಾರಂಪರಿಕ ಜ್ಞಾನದಿಂದ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಕುರುಬ ಸಮುದಾಯದಲ್ಲಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳೆರಡು ಇದ್ದರೂ, ಇಂದು ಉದ್ಯೋಗಾವಕಾಶಗಳ ಹುಡುಕಾಟದಲ್ಲಿ ಬೇರೆ ಕಡೆ ಮೂಲ ಕುಟುಂಬದಿಂದ ಹೊರಗೆ ಜೀವಿಸುವ ಪರಿಸ್ಥಿತಿಯಿಂದಾಗಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿದೆ.

**ಋತುಮತಿ ಶಾಸ್ತ್ರ :** ಸಮುದಾಯದ ಹೆಣ್ಣು ಮಗಳು ದೊಡ್ಡವಳಾದಾಗ, ವಿಶೇಷವಾದ ರೀತಿಯ ಆಚರಣೆಗಳನ್ನು ಮಾಡುತ್ತಾರೆ. ಹಸಿ ತೆಂಗಿನಕಾಯಿ ಗರಿಯ ಗುಡಿಸಲನ್ನು ನಿರ್ಮಿಸಿ, ಮನೆಯ ಮುಂದೆ ಆಕೆಯ ಸೋದರ ಮಾವನ ಕೈಯಿಂದ ಆಕೆಯನ್ನು ಹಸಿರು ಗುಡಿಸಲಿಗೆ ಸೇರಿಸುತ್ತಾರೆ. ದೊಡ್ಡವಳಾದ ಹೆಣ್ಣು ಎರಡು ರಾತ್ರಿ ಒಂದು ಹಗಲು ಆ ಹಸಿರು ಗುಡಿಸಲಿನಲ್ಲಿಯೇ ಕಳೆಯಬೇಕು. ಎರಡನೇ ರಾತ್ರಿ ಹಸಿರು ಗುಡಿಸಲು ಕಿತ್ತು ಹಾಕಿ ಬೆಳಗಿನ ಜಾವ ಊರಿನ ಆಚೆ ಅದನ್ನು ಸುಡುತ್ತಾರೆ. ಗುಡಿಸಲಿನಲ್ಲಿ ರಾತ್ರಿ ಇಡೀ ಋತುಮತಿಯಾದ ಹೆಣ್ಣು ಮಲಗುವಂತಿಲ್ಲ. ಎಚ್ಚರದಿಂದ ಇರಬೇಕು. ಅವಳಿಗೆ ನಿದ್ರೆ ಬರದೇ ಇರಲಿ ಎಂದು ಸಮುದಾಯದ ಸ್ತ್ರೀಯರು ಫಲಾಹಾರ ನೀಡಿ, ಹಾಡನ್ನು ಹಾಡುತ್ತಾರೆ. ಆನಂತರ ಒಂಬತ್ತನೇ ದಿನ ನೆಂಟರಿಷ್ಟರನ್ನು ಕರೆಸುತ್ತಾರೆ. ಹುಡುಗಿಗೆ ಉಡುಗೊರೆ ಕೊಡುವ ಸಂಪ್ರದಾಯವಿದೆ. ಬಂದವರೆಲ್ಲರಿಗೂ ಸಿಹಿ ಊಟದ ಕಾರ್ಯಕ್ರಮ ಏರ್ಪಡಿಸುತ್ತಾರೆ. ಆ ದಿನ ಮನೆಯನ್ನು ಗೋಮೂತ್ರದಿಂದ ಶುಚಿಗೊಳಿಸಿ ರೇವಣ್ಣ (ದಾಸಪ್ಪ)ರನ್ನು ಕರೆಸಿ ಸೂತಕ ಕಳೆಯುತ್ತಾರೆ. ದಾಸಪ್ಪ ನವರು ಮನೆಯ ಸೂತಕ ಕಳೆಯಿತು ಎಂದು ಮೂರು ಬಾರಿ ಘೋಷಿಸಿದ ಮೇಲೆ ಹುಡುಗಿಗೆ ಆರತಿ ಬೆಳಗಿ ಮನೆಯ ಒಳಗೆ ಪ್ರವೇಶ ಮಾಡಿಕೊಳ್ಳುತ್ತಾರೆ.

**ವಿವಾಹ ಆಚರಣೆ :**

**ಹುಡುಗನನ್ನು ನೋಡುವ ಆಚರಣೆ :–** ಹುಡುಗಿಯ ತಂದೆ ಮೊದಲು ಹುಡುಗನನ್ನು ನೋಡಲು ಹುಡುಗನ ಮನೆಗೆ ಹೋಗುತ್ತಾರೆ. ಹೀಗೆ ಹೋಗುವಾಗ ಶುಭ ಅಶುಭ ಶಕುನ ಮುಂತಾದವುಗಳನ್ನು ಗಮನಿಸುತ್ತಾರೆ. ದಾರಿಯಲ್ಲಿ ಹಾಲು ಮಾರುವವರು, ಕತ್ತಿ, ಹೂವು, ಹಣ್ಣು, ನರಿ ಮುಂತಾದವು ಎದುರಿಗೆ ಬಂದರೆ ಶುಭ ಸೂಚನೆ ಎಂದು ತಿಳಿಯುತ್ತಾರೆ. ಹೂವು ಹಣ್ಣು ತಾಂಬೂಲ ತೆಗೆದುಕೊಂಡು ಹೋಗುತ್ತಾರೆ.

**ಹುಡುಗಿಯನ್ನು ನೋಡುವ ಆಚರಣೆ :** ಹುಡುಗನ ತಂದೆ ತಾಯಿ ಮತ್ತು ಬಂಧು ಬಳಗದ ೫ ಜನರು ಹುಡುಗಿಯನ್ನು ನೋಡಲು ಹೋಗುತ್ತಾರೆ. ಹುಡುಗಿಯ ನಡೆ ನುಡಿ ಗಮನಿಸುತ್ತಾರೆ. ಹುಡುಗಿಯು ತನ್ನ ಕಾಲಿನ ಹಿಮ್ಮಡಿ ಕಾಣಿಸದಂತೆ ಸೀರೆ ತೊಟ್ಟಿರಬೇಕು. ನಡಿಗೆಯು ಸರಿಯಾಗಿರಬೇಕು. ಅಂಗಾಲಿನ ಮಧ್ಯದಲ್ಲಿ ಸಂದುಗಳಿರಬಾರದು. ಹುಡುಗಿಯು ಗಂಡಿನ ಕಡೆಯವರಿಗೆ ತಾಂಬೂಲ ಕೊಟ್ಟಾಗ ಸುಣ್ಣ ಹೆಚ್ಚಾಗಿ ಸುರಿದರೆ, ಆ ಸಂಬಂಧವನ್ನು ತಿರಸ್ಕರಿಸುತ್ತಾರೆ.

ಸ್ವಜಾತಿಯಲ್ಲಿ ಬೇರೆ ಬೇರೆ ಬೆಡಗುಗಳಲ್ಲಿ ಹುಡುಗ ಹುಡುಗಿ ಪರಸ್ಪರ ಒಪ್ಪಿದರೆ, ಹಿರಿಯರಿಗೆ ತಮ್ಮ ಬಯಕೆಯನ್ನು ತಿಳಿಸುತ್ತಾರೆ. ಎಲ್ಲರಿಗೂ ಒಪ್ಪಿಗೆ ಯಾದರೆ ಮದುವೆ ಕಾರ್ಯ ನೆರವೇರುತ್ತದೆ. ಕುರುಬ ಸಮುದಾಯದಲ್ಲಿ ತುಮಕೂರು ಜಿಲ್ಲೆಯಲ್ಲಿರುವ ಬೆಡಗುಗಳೆಂದರೆ ಆನೆಕುರುಬ, ಅಂಡೆಕುರುಬ, ಕೊಳ್ಳಿ, ನೆರಳು, ಸಾಮಂತ, ಸಾವಂತ, ದುಡ್ಡಿನ ಕುರುಬ, ಮೂರು ಹೆಣ್ಣಿನ ಕುರುಬ, ಆಸಲು ಕುರುಬ, ಬನ್ನಿ ಕುರುಬ, ಭೋನ್ಸ್ಲೆ ಕುರುಬ ಇತ್ಯಾದಿ. ಸಮ ಬೆಡಗಿನಲ್ಲಿ ಮದುವೆ ನಿಷೇಧವಿದೆ. ಕುರುಬರಲ್ಲಿ ಎರಡು ಒಳಪಂಗಡಗಳಿವೆ. ಹತ್ತಿ ಕಂಕಣ, ಉಣ್ಣೆ ಕಂಕಣ ಈ ಎರಡು ಪಂಗಡಗಳ ನಡುವೆ ವಿವಾಹ ನಡೆಯುವುದಿಲ್ಲ.

**ವೀಳ್ಯ ಬದಲಿಸುವ ಆಚರಣೆ :** ಸಮುದಾಯದ ಹಿರಿಯರು ಹುಡುಗಿಯನ್ನು ಒಪ್ಪಿದ ನಂತರ ಹುಡುಗಿಯ ಮನೆಯಲ್ಲಿ ವೀಳ್ಯಶಾಸ್ತ್ರ ಇಟ್ಟುಕೊಳ್ಳುತ್ತಾರೆ. ಎಲ್ಲಾ ರೀತಿಯ ಪೂಜೆ ಸಾಮಾನು ಜೊತೆಗೆ ಕಳಸ ಇಟ್ಟು ಮೊದಲು ಹುಡುಗಿಯ ಕೈಯಲ್ಲಿ ಪೂಜೆ ನಡೆಸುತ್ತಾರೆ. ನಂತರ ಹಿರಿಯರು. ಗಂಡಿನ ತಂದೆ–ತಾಯಿ, ಹೆಣ್ಣಿನ ತಂದೆ–ತಾಯಿ ಪೂಜೆ ಮಾಡುತ್ತಾರೆ. ಇಲ್ಲಿ ಗಣಪತಿ ಇಡುವುದು ಕಡ್ಡಾಯವಾಗಿರುತ್ತದೆ. ಕೊಟ್ಟ ವೀಳ್ಯ, ತಂದ ವೀಳ್ಯ ಎಂದು ಹೇಳುವುದು ಕಡ್ಡಾಯವಾಗಿರುತ್ತದೆ. ನಂತರ ಹುಡುಗಿಗೆ ಮಡಿಲು ತುಂಬುವ ಶಾಸ್ತ್ರ ಇರುತ್ತದೆ. ಮದುವೆಯ ಮೂಹರ್ತದ ಹಿಂದಿನ ದಿನ ಹೆಣ್ಣಿಗೆ ಬಳೆ ತೊಡಿಸುವ ಶಾಸ್ತ್ರ ಇರುತ್ತದೆ. ಗಂಡಿಗೆ ಐದು ಬಗೆಯ ಹಾಗೂ ಹೆಣ್ಣಿಗೆ ನಾಲ್ಕು ಬಗೆಯ ಶಾಸ್ತ್ರಗಳ ಆಚರಣೆಗಳು ಇವೆ.

**ಬಾಣಂತಿ ನಿಯಮಗಳು :** ಹೆಣ್ಣು ಬಸುರಿಯಾದಾಗ ಚೊಚ್ಚಲ ಹೆರಿಗೆಗಾಗಿ ಅವಳನ್ನು ತವರು ಮನೆಗೆ ಕಳುಹಿಸಿ ಕೊಡುವ ಪದ್ಧತಿ ಇದೆ. ಗಂಡಿನ ಮನೆಗೆ ಹೆಣ್ಣಿನ ಮನೆಯ ಐದು ಜನ ಮುತ್ತೈದೆಯರು ಬಂದು ಬಸುರಿಗೆ ಅರಿಶಿಣ, ಕುಂಕುಮ, ಬಳೆ, ಹೂವುಗಳನ್ನು ಕೊಟ್ಟು ತಾಯಿ ಮನೆಗೆ ಕರೆ ತರುತ್ತಾರೆ. ಈ ಶಾಸ್ತ್ರ ಐದು ಅಥವಾ ಒಂಬತ್ತನೇ ತಿಂಗಳಲ್ಲಿ ನಡೆಯುವುದು. ಮಗು ಹುಟ್ಟಿದಾಗ ಬಿದಿರಿನ ಮೊರದಲ್ಲಿ ಹಾಕುತ್ತಾರೆ. ಮೊರದ ತಳದಲ್ಲಿ ಭತ್ತದ ಹುಲ್ಲನ್ನು ಹಾಸುತ್ತಾರೆ.

**ಶವ ಸಂಸ್ಕಾರದ ಆಚರಣೆಗಳು** : ಮರಣ ಹೊಂದಿದವರಿಗೆ ಮೊದಲು ಸ್ನಾನ ಮಾಡಿಸಿ, ಮೂರು ರೀತಿಯ ಪೂಜೆ ನೆರವೇರಿಸುತ್ತಾರೆ. ಶವ ಸಂಸ್ಕಾರವಾದ ಹನ್ನೆರಡನೇ ದಿನಕ್ಕೆ ತಿಥಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಮನೆಯನ್ನು ಶುಚಿಮಾಡಿ ಸೂತಕ ತೆಗೆಯುವ ಕಾರ್ಯ ಮಾಡುತ್ತಾರೆ. ಸತ್ತ ಒಂದು ತಿಂಗಳೊಳಗೆ ಮತ್ತೊಂದು ಬಾರಿ ಪೂಜೆ ಸಲ್ಲಿಸುತ್ತಾರೆ. ಅನಂತರ ವರ್ಷಕ್ಕೆ ಒಂದು ಬಾರಿ ಮಾತ್ರ ಪೂಜೆ ಸಲ್ಲಿಸುತ್ತಾರೆ

**ಕುರುಬರಲ್ಲಿ ನಿಷೇಧಗಳು** : ಬೇರೆ ಜಾತಿಯ ಕನ್ಯೆಯನ್ನು ವಿವಾಹವಾದರೆ ಮತ್ತು ತಮ್ಮ ಜಾತಿಗೆ ವಿರುದ್ದವಾಗಿ ನಡೆದುಕೊಂಡರೆ ಅವರನ್ನು ಕುಲದಿಂದ ಹೊರಕ್ಕೆ ಹಾಕುತ್ತಾರೆ. ಇವರು ಸಮುದಾಯದ ಯಾವುದೇ ಶುಭ–ಅಶುಭ ಕಾರ್ಯಗಳಲ್ಲಿ ಪಾಲ್ಗೊಳ್ಳುವಂತಿಲ್ಲ, ಸಮುದಾಯದ ಹುಡುಗಿ ಬೇರೆ ಜಾತಿಯ ಹುಡುಗನನ್ನು ವಿವಾಹವಾದರೆ ಆಕೆಯನ್ನು ಸಮುದಾಯದ ಒಳಗೆ ಸೇರಿಸಿಕೊಳ್ಳುವುದಿಲ್ಲ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ.

**ಧಾರ್ಮಿಕ ಜೀವನ** : ಸಮುದಾಯದ ಜನರು ಬೀರಪ್ಪ, ಮೈಲಾರಲಿಂಗ, ಬೀರಲಿಂಗೇಶ್ವರ, ಗಂಗಮಾಳಮ್ಮ, ಮದ್ದೂರಮ್ಮ, ಲಕ್ಷ್ಮಿದೇವಿ, ಸಿದ್ದರಾಮೇಶ್ವರ, ರೇವಣ್ಣ ಸಿದ್ದೇಶ್ವರ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ.

**ಹಬ್ಬಗಳು** : ಮಹಾನವಮಿ, ದೀಪಾವಳಿ, ಕನಕ ಜಯಂತಿ, ಗೌರಿ ಗಣೇಶ, ರಾಮನವಮಿ, ಸಂಕ್ರಾಂತಿ, ಶಿವರಾತ್ರಿ, ಯುಗಾದಿ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

**ಸಾಮಾಜಿಕ ಆಚರಣೆಗಳು** : ಜಾತ್ರೆಗಳ ಸಂದರ್ಭದಲ್ಲಿ ಕುರಿಗಳ ತುಪ್ಪಟದಿಂದ ತಯಾರಿಸಿದ ಕಂಬಳಿಯನ್ನು ಕಡ್ಡಾಯವಾಗಿ ಉಪಯೋಗಿಸುತ್ತಾರೆ. ಜೊತೆಗೆ ಬಡಾಬಗ್ಗು (ಡಮರುಗ) ಕುರಿಯ ತುಪ್ಪಟದಿಂದ ಮಾಡಿರುವ ಕಿರೀಟದಂತಿರುವ ತಲೆಯ ಟೊಪಿ ಮತ್ತು ಕೆಂಪು ವಸ್ತ್ರ, ಕಪ್ಪು ವಸ್ತ್ರ, ಕಾಲ್ಗೆಜ್ಜೆ, ನಡುಪಟ್ಟಿ (ಕೆಂಪು ಬಟ್ಟೆ) ಕೈಯಲ್ಲಿ ಡಮರುಗ ಮತ್ತು ಸುಂದರವಾಗಿ ಕಾಣುವ ಕಿವಿಯುಂಗುರ, ವಿಭೂತಿ ಅತ್ಯಂತ ಸುಂದರವಾಗಿ ಕಾಣುವ ವಸ್ತ್ರ ಬಳಸುತ್ತಾರೆ.

ಕುರಿಗಳನ್ನು ಸಮುದಾಯದ ಜನರು ದೇವರೆಂದು ಪೂಜಿಸುತ್ತಾರೆ. ಮಕ್ಕಳಂತೆ ಪೋಷಿಸುತ್ತಾರೆ. ಕಾರಹುಣ್ಣಿಮೆಯ ದಿನದಂದು ಕುರಿಗಳಿಗೆ ಸುಂದರವಾಗಿ ಶೃಂಗಾರ ಮಾಡಿ ಪೂಜಿಸುತ್ತಾರೆ. ಪ್ರತಿ ಶುಕ್ರವಾರ ಕುರಿಗಳಿಗೆ ಹೂವು ಹಾಕಿ ಅಲಂಕರಿಸಿ ಪೂಜಿಸುತ್ತಾರೆ. ಹೊಸದಾಗಿ ಕೊಂಡು ತಂದ ಕುರಿಗಳನ್ನು ಮನೆಯ ಹೆಣ್ಣು ಮಕ್ಕಳಿಂದ ಪೂಜೆ ಮಾಡಿಸಿ ಒಳಗೆ ಕುರಿಯನ್ನು ತೆಗೆದುಕೊಂಡು ಬರುತ್ತಾರೆ. ಧಾರ್ಮಿಕ ಹಬ್ಬ ಆಚರಣೆಗಳಲ್ಲಿ ಡೊಳ್ಳುಕುಣಿತ ನೃತ್ಯವನ್ನು ಸಾಮೂಹಿಕವಾಗಿ ಮಾಡುತ್ತಾರೆ.

**ಆರ್ಥಿಕ ಜೀವನ** : ತುಮಕೂರು ಜಿಲ್ಲೆಯು ಬಯಲು ಸೀಮೆಯ ಲಕ್ಷಣವನ್ನು ಹೊಂದಿರುವ ಭೌಗೋಳಿಕ ನೆಲೆಯಾಗಿರುವುದರಿಂದ; ಇಲ್ಲಿನ ಜನರ ಆರ್ಥಿಕ ಜೀವನ ಮಳೆಯನ್ನೇ ಅಶ್ರಯಿಸಿದೆ. ಉತ್ತಮ ನೀರಾವರಿ ಸೌಲಭ್ಯ ಇಲ್ಲದೆ ಬಡತನದ ಸ್ಥಿತಿಯಲ್ಲಿ ಸಮುದಾಯದ ಜನರು ಜೀವಿಸುತ್ತಾರೆ. ಆರ್ಥಿಕ ಮೂಲವೇ ಕುರಿಗಳ ಸಾಕಾಣಿಕೆಯಾಗಿದೆ. ಕುರಿಗಳಿಗೆ ಎಲ್ಲಾ ಕಾಲದಲ್ಲಿಯೂ ಆಹಾರ ಒದಗಿಸಲಾಗದೆ, ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳಿಗೆ ಕುರಿಗಳೊಂದಿಗೆ ವಲಸೆ ಹೋಗುತ್ತಾರೆ. ವರ್ಷದಲ್ಲಿ ೬–೮ ತಿಂಗಳು ಕುರಿಗಾಹಿಗಳು ವಲಸೆಯಲ್ಲಿಯೇ ಇರುತ್ತಾರೆ. ಇವರ ಆರ್ಥಿಕ ಮೂಲ ಆಧಾರ ಇದೇ ಆಗಿದೆ. ಇನ್ನೂ ಕೆಲವು ಚಿಕ್ಕ ಮಟ್ಟ ವ್ಯಾಪಾರಿಗಳು, ಉದ್ಯೋಗಸ್ಥರೂ ಇದ್ದಾರೆ. ಅವರು ಜಿಲ್ಲೆಯಾದ್ಯಂತ ಬೆರಳಣಿಕೆಯಷ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹೆಂಗಸರು ಖಾಸಗಿ ಕಾರ್ಖಾನೆಗಳಲ್ಲಿ ದುಡಿಯಲು ಹೋಗುತ್ತಾರೆ. ಇವರ ಆರ್ಥಿಕ ಸ್ಥಿತಿಯೂ ಉತ್ತಮವಾಗಿಲ್ಲ. ಕೃಷಿಯನ್ನು ನಂಬಿದ ಕುಟುಂಬಗಳಿಗೆ ಮಳೆಯಾದರೆ ಮಾತ್ರ ಬೆಳೆ ಇಲ್ಲದಿದ್ದರೆ ನಷ್ಟವನ್ನು ಅನುಭವಿಸುವ ಪರಿಸ್ಥಿತಿ ಇದೆ. ಕನಕ ಪತ್ತಿನ ಸಹಕಾರ ಬ್ಯಾಂಕುಗಳು ಜಿಲ್ಲೆಯಾದ್ಯಂತ ೨ ಇದ್ದು, ಸಾಲಸೌಲಭ್ಯ ಒದಗಿಸುತ್ತಿವೆ.

**ಶಿಕ್ಷಣ** : ೨೦೦೧ ರಿಂದ ಈಚೆಗೆ ಶಿಕ್ಷಣದ ಮಟ್ಟ ಸುಧಾರಿಸಿದೆ. ಪದವಿ, ಸ್ನಾತಕೋತ್ತರ ಪದವಿ, ತಾಂತ್ರಿಕ ಪದವಿ, ಡಾಕ್ಟರೇಟ್ ಪದವಿಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿದ್ದಾರೆ. ಪದವಿಯಿಂದ ಮುಂದೆ ಓದುವ ವಿದ್ಯಾರ್ಥಿಗಳು ಪಾಳೆಯ ಕೆಲಸ ಮಾಡಿಕೊಂಡು ಓದನ್ನು ಮುಂದುವರೆಸಿದ್ದಾರೆ. ಶೈಕ್ಷಣಿಕವಾಗಿ ಯಾವುದೇ ಸೌಲಭ್ಯ ಸರ್ಕಾರದಿಂದ ದೊರೆಯುತ್ತಿಲ್ಲ. ತಾಲ್ಲೋಕು ಮಟ್ಟದ ಕುರುಬರ ಸಂಘಗಳು ಕುಣಿಗಲ್ ಹೊರತು ಪಡಿಸಿ ಎಲ್ಲಾ ತಾಲ್ಲೂಕುಗಳಲ್ಲಿದ್ದು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಹಾಸ್ಟೆಲ್ ಸೌಲಭ್ಯ, ಹೆಚ್ಚು ಅಂಕ ಪಡೆದು ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ ಇತ್ಯಾದಿ ಕೆಲಸ ನಿರ್ವಹಿಸುತ್ತಿವೆ.

**ಉಪಸಂಹಾರ** : ಈ ಮೇಲೆ ತಿಳಿಸಿದಂತೆ, ತುಮಕೂರು ಜಿಲ್ಲೆಯ ಕುರುಬರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನವು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ತನ್ನದೇ ಆದಂತಹ ಸ್ಥಳದ ವೈಶಿಷ್ಟತೆಯನ್ನು ಮೈಗೂಡಿಸಿಕೊಂಡು, ಆಚರಣೆಯನ್ನು ಉಳಿಸಿಕೊಂಡಿದೆ. ಜಿಲ್ಲೆಯಾದ್ಯಂತ ಸಮುದಾಯದ ೮೫ % ಭಾಗದಷ್ಟು ಕುಟುಂಬಗಳು ಬಡತನ, ಅನಕ್ಷರತೆ, ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿವೆ. ಸಮುದಾಯದ ಅಭಿವೃದ್ದಿ ಯಾಗಬೇಕೆಂದರೆ ಶಿಕ್ಷಣ ಬಹಳ ಮುಖ್ಯ. ಅದಕ್ಕಾಗಿ ಸಮುದಾಯದ ಸಂಘಟನೆಗಳು ನಿರಂತರವಾಗಿ ಶ್ರಮಿಸುತ್ತಿವೆ. ಹೀಗೆ ಈ ಜಿಲ್ಲೆಯು ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದ್ದು, ಇಲ್ಲಿ ನೆಲೆಸಿರುವ ಕುರುಬ ಸಮುದಾಯದ ಜನರು ಇಂದಿಗೂ ತಮ್ಮ ಮೂಲ ಪಾರಂಪರಿಕ ವೃತ್ತಿಯನ್ನು ಅನುಸರಿಸುತ್ತಾ, ಸಹಕಾರಯುತವಾಗಿ ಸಮುದಾಯದ ಏಳಿಗೆಗೆ ಶ್ರಮಿಸಲು ಎಲ್ಲರೂ ದುಡಿಯುವಂತಹ ಮನಸ್ಸಿನವರಾಗಿದ್ದಾರೆ. ಸಮುದಾಯವು ಶೈಕ್ಷಣಿಕವಾಗಿ ಅಭಿವೃದ್ದಿಯ ಪಥವನ್ನು ಹಿಡಿದು ಸಾಗುತ್ತಿದೆ. ಮುಂದಿನ ದಿನಗಳಲ್ಲಿ ಅಭಿವೃದ್ದಿಯ ನಕ್ಷೆಯನ್ನು ನೋಡುವ ನಿರೀಕ್ಷೆ ಇಟ್ಟು ಕೊಳ್ಳಬೇಕಿದೆ.

Review Of Research
Vol. 3 | Issue. 12 | Sept. 2014
Impact Factor : 2.1002 (UIF)
ISSN:-2249-894X
Available online at www.ror.isrj.net

**ಪರಾಮಾರ್ಶನ ಗ್ರಂಥಗಳು :**

೧) ಚಂದ್ರಪ್ಪ ಅಜ್ಜಂಪುರ 'ಕುರುಬರ ಕುರುಹುಗಳು' ವಿದ್ಯಾನಿಧಿ ಪ್ರಕಾಶನ, ಗದಗ.
೨) 'ಜನಸಮುದಾಯ ಸಂಪುಟ ೨೦೦೦ ಕರ್ನಾಟಕ ರಾಜ್ಯಕೋಶ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
೩) ಚಂದ್ರಕಾಂತ ಬಿಜ್ಜರಗಿ 'ಕುರುಬರ ಹೆಜ್ಜೆಗಳು' ಶೈಲ ಚಂದ್ರ ಪ್ರಕಾಶನ, ವಿಜಾಪುರ.
೪) 'ಹಾಲುಮತ ವ್ಯಾಸಂಗ' ಐ ಟಿ ಹಳ್ಳಿಕೇರಿ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
೫) 'ಕುರುಬ ಸಮುದಾಯ ಭ್ರಾಷೆ ಮಾನವ ಭಾಷಾಶಾಸ್ತ್ರ ಅಧ್ಯಯನ' ಡಾ ಎಸ್ ಎಸ್ ಅಂಗಡಿ, ಆನಂದ ಕಂದ ಗ್ರಂಥಮಾಲೆ, ಬಲರಾಮ ಟೀಚರ್ಸ್ ಕಾಲೋನಿ, ಮಲ್ಲಾಡಿ ಹಳ್ಳಿ, ೫೭೭೫೩೧– ೨೦೦೯
೬) 'ಹಾಲುಮತದ ಸ್ತ್ರೀಯರು' ಶಂಕರ ಶಿ. ಕುಂಬಾರ, ವಿದ್ಯಾನಿಧಿ ಪ್ರಕಾಶನ, ಗದಗ. ೨೦೦೯
೭) ಎಂ ಜೈಕುಮಾರ 'ಚಲುವು ಚಪ್ಪರ' ಹಾಲುಮತ ಸಂಸ್ಕೃತಿ ಸಂಶೋಧನಾ ಪ್ರತಿಷ್ಠಾನ.



**Radhamani T R**
Research scholar, Department of tribal studies, Kannada University, Hampi, Karnataka